ಇಂತಹ ಸಂದರ್ಭದಲ್ಲಿ ಇಂಜೆಕ್ಷನ್ ಕೊಟ್ಟು ಸಾಯಿಸುತ್ತೇವೆ ಎಂದರೆ ಅವುಗಳ ಮಾಲೀಕರು ಯಾವರೀತಿ ಬದುಕಬೇಕು. ದನಗಳ ಮಾಲೀಕರು ಬಹಳ ಬಡವರು ಇದ್ದಾರೆ. ಲಸಿಕೆಯನ್ನು ಕೊಟ್ಟಮೇಲೆ ಎಲ್ಲಾ ಕಡೆಯಲ್ಲಿರತಕ್ಕ ದನಗಳು ಸಾಯಬೇಕಾಗಿತ್ತು. ಇಲ್ಲಿಯೇ ಸಾಯಲಿಕ್ಕೆ ಕಾರಣ ಏನು. ಯಾವ ಡಾಕ್ಟರ್ ಇಂಜೆಕ್ಷನ್ ಕೊಟ್ಟರು ಅವರು ತಪ್ಪು ಮಾಡಿದ್ದಾರೆ. ೫೦-೬೦ ದನಗಳನ್ನು ಕೊಂದಿದ್ದಾರೆ. ತಾವು ತಪ್ಪು ಮಾಡಿದಂಥ ಡಾಕ್ಟರನ್ನು ಸಸ್ಪೆಂಡ್ ಮಾಡಿದ್ದೀರಿ, ತಮಗೆ ತಪ್ಪು ಮಾಡಿದ್ದಾನೆಂದು ಗೊತ್ತಾದ ಮೇಲೆ ದನಗಳ ಮಾಲೀಕರಿಗೆ ಪರಿಹಾರ ಕೊಟ್ಟರೆ ಮಾತ್ರ ಅನುಕೂಲವಾಗುತ್ತದೆ. ಸರ್ಕಾರ ತಪ್ಪು ಮಾಡಿದ ಮೇಲೆ ಪರಿಹಾರ ಕೊಡಲೇಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ.—ಅಧ್ಯಕ್ಷರೆ, ಈಗಾಗಲೇ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಅಲ್ಲಿರತಕ್ಕ ಗ್ರಾಮಸ್ಥರು ಈ ಖಾಯಿಲೆ ಉಲ್ಬಣವಾಗುವವರೆಗೂ ತಿಳಿಸಲಿಕ್ಕೆ ಹೋಗಿಲ್ಲ. ಖಾಯಿಲೆ ಉಲ್ಬಣವಾಗಿದ್ದಂಥ ಸಂದರ್ಭದಲ್ಲಿ ಔಷಧಿ ಕೊಟ್ಟ ತಕ್ಷಣ ಅವು ಬದುಕುವುದಿಲ್ಲ. ಬಹಳ ತೀವ್ರವಾದ ಖಾಯಿಲೆ ಇರತಕ್ಕ ಸಂದರ್ಭದಲ್ಲಿ ಔಷಧಿ ಕೊಟ್ಟಾಕ್ಷಣ ಗುಣ ಆಗುತ್ತದೆಂದು ಇಲ್ಲ ಸರ್ಕಾರ ತಪ್ಪು ಮಾಡಿದೆ ಎನ್ನುವುದು ಸರಿಯಲ್ಲ. ಅಲ್ಲಿರತಕ್ಕ ಪಶುಪರೀಕ್ಷರನ್ನು ಅಮಾನತ್ತಿನಲ್ಲಿಟ್ಟಿರತಕ್ಕ ಉದ್ದೇಶ ಏನೆಂದರೆ, ಅವರು ಸಹ ಪ್ರಿಕಾಷನರಿಯಾಗಿ ಮೊದಲು ಏನು ಮಾಡಿದ್ದರು ಎನ್ನುವುದನ್ನು ತನಿಖೆ ಮಾಡಬೇಕೆಂದು. ಔಷಧಿಯನ್ನು ಕೊಟ್ಟಮೇಲೆ ೨೧ ರಾಸುಗಳು ಏನು ಸತ್ತಿವೆ, ಅಲ್ಲಿ ಏನಾದರೂ ದೋಷ ಇದೆಯೇ ಎನ್ನುವುದನ್ನು ನೋಡಲಿಕ್ಕೆ ಅಮಾನತ್ತಿನಲ್ಲಿಟ್ಟಿರುವುದು. ಈಗ ಪರಿಹಾರ ಕೊಡಲಿಕ್ಕೆ ಏನು ಕಾರ್ಯಕ್ರಮ ಇಲ್ಲ. ರೋಗದಿಂದ ಸಾಯತಕ್ಕವುಗಳಿಗೆ ಪರಿಹಾರ ಕೊಡತಕ್ಕದ್ದು ಇಟ್ಟುಕೊಂಡರೆ ಬಹಳ ಕಷ್ಟವಾಗುತ್ತದೆ. ಪರಿಹಾರವನ್ನು ಕೊಡಲಿಕ್ಕೆ ಆಗುವುದಿಲ್ಲ. ಈಗ ತಮಗೆ ಹೇಳಬೇಕೆಂದರೆ, ೪೦೦ ರಾಸುಗಳಿಗೆ ಲಸಿಕೆಯನ್ನು ಹಾಕಿದ್ದಾರೆ, ತಮ್ಮ ಲೆಕ್ಕದ ಪ್ರಕಾರ ಹೇಳುವುದಾದರೆ ಅವುಗಳೆಲ್ಲಾ ಸಾಯಬೇಕಾಗಿತ್ತು. ಆ ರೀತಿ ಆಗಿಲ್ಲ. ಆ ಊರಿನಲ್ಲಿ ಸತ್ತಿರುವುವು ೨೧ ರಾಸುಗಳು ಮಾತ್ರ. ಆದ್ದರಿಂದ, ಲಸಿಕೆ ಕೊಟ್ಟಿರುವುದರಿಂದ ತಪ್ಪಿಲ್ಲವೆಂದು ಭಾವಿಸಬಾರದು. ಲಸಿಕೆಯಿಂದಲೇ ಸಾವು ಆಗಿದ್ದರೆ ಎಲ್ಲಾ ರಾಸುಗಳಿಗೂ ಸಾವು ಆಗುತ್ತಿತ್ತು. ಈಗ ಏನಾದರೂ ದೋಷವಾಗಿದೆಯೇ ಎನ್ನುವುದನ್ನು ಪತ್ತೆ ಹಚ್ಚುವ ದೃಷ್ಟಿಯಿಂದ, ಮುಂಜಾಗ್ರತೆಯ ಕ್ರಮದ ಬಗ್ಗೆ ತನಿಖೆ ಮಾಡಬೇಕೆಂಬ ದೃಷ್ಟಿಯಿಂದ ಅವರನ್ನು ಅಮಾನತ್ತಿನಲ್ಲಿಟ್ಟಿರತಕ್ಕದ್ದು. ಆದ್ದರಿಂದ ಇದು ಸರ್ಕಾರದ ತಪ್ಪಲ್ಲ.

ನಿಯಮ ೫೩ಕ್ಕಿರ ಮೇರೆಗೆ

ಅಧ್ಯಕ್ಷರು.—ಶ್ರೀ ಕೆ. ವಸಂತ ಬಂಗೇರ ಸದಸ್ಯರು ಗೈರು ಹಾಜರು.

(2) ರಾಣೆಬೆನ್ನೂರು ತಾಲ್ಲೂಕಿನ ಮುದೆನೂರು ಗ್ರಾಮದಲ್ಲಿ ನೀರಿನ ಟ್ಯಾಂಕನ್ನು ಸ್ವಚ್ಛ ಮಾಡದಿರುವುದು

ಶ್ರೀ ಕೆ. ಬಿ. ಕೋಳಿವಾಡ.—ಅಧ್ಯಕ್ಷರೆ, ರಾಣೆಬೆನ್ನೂರು ತಾಲ್ಲೂಕು ಮುದೇನೂರು ಗ್ರಾಮದಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆಯಾಗಿ ಮೂರು ವರ್ಷಗಳಾದರೂ ಸಹಿತ ಸದರಿ ನೀರಿನ ಸಂಗ್ರಹಾಲಯವನ್ನು ಒಂದು ಸಾರಿಯಾದರೂ ಸ್ವಚ್ಛ ಮಾಡಿರುವುದಿಲ್ಲ. ಹೀಗಾಗಿ ಸದರಿ ನೀರಿನ ಸಂಗ್ರಹಾಲಯದಲ್ಲಿ ವಿಪರೀತ ಹೊಲಸು ಸಂಗ್ರಹವಾಗಿ ಹುಳುಗಳು ಸಹ ಆಗಿರುತ್ತವೆ. ಸಂಗ್ರಹಾಲಯವನ್ನು ಸ್ವಚ್ಛ ಮಾಡಲು ಹಾಗೂ ಹೊಲಸು ನೀರನ್ನು ಹೊರಗೆ ಹಾಕಲು ಔಟ್‌ಲೆಟ್‌ಗಳು ಹೆಚ್ಚಿರುವುದಿಲ್ಲ ಅಂತಹ ನೀರನ್ನೇ ಇಂದಿಗೂ ಸಹ ಜನರಿಗೆ ಕುಡಿಯಲಿಕ್ಕೆ ಪೂರೈಸುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ಆರೋಗ್ಯ ಇಲಾಖಾ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್.—ಮಾನ್ಯ ಸದಸ್ಯರ ಪ್ರಶ್ನೆ ಈಗ ಬಂದಿದೆ. ಅವರಿಗೆ ಉತ್ತರವನ್ನು ನಾನು ಕಳುಹಿಸಿಕೊಡುತ್ತೇನೆ.